NOVEMBER 25, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ವಿಜಯನಗರ ಜಿಲ್ಲೆ, ಕಮಲಾಪುರದ, ಅಟಲ್ ಬಿಹಾರಿ ವಾಜಪೇಯಿ ಜೂವಲಾಜಿಕಲ್ ಪಾರ್ಕ್–ಪ್ರಾಣಿ ಉದ್ಯಾನವನವನ್ನು, ಅಭಿವೃದ್ಧಿಪಡಿಸಿ, ಅಗತ್ಯ ಮೂಲಸೌಕರ್ಯ ಕಲ್ಪಿಸಲು, ಹೆಚ್ಚುವರಿಯಾಗಿ 3 ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಕೆ. ರಾಮಲಿಂಗಾ ರೆಡ್ಡಿ ಹೇಳಿದರು. ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ, 18 ಕೋಟಿ ರೂಪಾಯಿ ಅನುದಾನದಲ್ಲಿ ಕೈಗೊಂಡ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಪ್ರವೇಶ ದ್ವಾರ, ಕ್ಯಾಂಟೀನ, ಮಾಹಿತಿ ಕೇಂದ್ರ, ಪ್ರವಾಸಿಗರಿಗೆ ವಿಶ್ರಾಂತಿ ತಾಣ ಸೇರಿದಂತೆ ಹಲವು ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದರು.

<><><>

ಬೆಂಗಳೂರು, ಬೊಮ್ಮನಹಳ್ಳಿ ಗಾರ್ಮೆಂಟ್ಸ್ ಕಾರ್ಮಿಕರ, ಮನವಿಯನ್ನು ಕೇಂದ್ರ ಕಾರ್ಮಿಕ ಸಚಿವಾಲಯದ ಗಮನಕ್ಕೆ ತಂದ ಬಳಿಕ, ಪಿ.ಎಫ್ ಉಳಿತಾಯದ ಶೇಕಡ 90 ರಷ್ಟು ಹಣವನ್ನು ಹಿಂಪಡೆಯುವ ಅವಕಾಶ ಸೇರಿದಂತೆ, ಮೂರು ಮಹತ್ವದ ಸುಧಾರಣೆಗಳಿಗೆ ಅನುಮೋದನೆ ನೀಡಿರುವುದು, ಕಾರ್ಮಿಕರ ಪಾಲಿಗೆ ಸಮಾಧಾನದ ಸಂಗತಿಯಾಗಿದೆ ಎಂದು ಸಂಸದ, ತೇಜಸ್ವಿ ಸೂರ್ಯ ಹೇಳಿದರು. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ಸಚಿವ ಮನ್ಸುಖ್ ಮಾಂಡವೀಯ, ಗಾರ್ಮೆಂಟ್ಸ್ ಕಾರ್ಮಿಕರೊಂದಿಗೆ ನಡೆಸಿದ, ವರ್ಚುವಲ್ ಸಂವಾದದಲ್ಲಿ ಪಾಲ್ಗೊಂಡು, ಮಾತನಾಡಿದರು.

<><><>

ಆಕಾಶವಾಣಿ 90 ವರ್ಷಗಳ, ಸಾರ್ಥಕ ಸಾರ್ವಜನಿಕ ಪ್ರಸಾರ ಸೇವೆಯ ಹಿನ್ನೆಲೆ, ಪ್ರಸಾರ ಭಾರತಿ, ಆಕಾಶವಾಣಿಯ, 90ನೇ ವಾರ್ಷಿಕೋತ್ಸವದ ಪ್ರಯುಕ್ತ, 30 ವರ್ಷದೊಳಗಿನ ಯುವ ಕಲಾವಿದರಿಗೆ, 'ಎ.ಐ.ಆರ್. ರೈಸಿಂಗ್ ಸ್ಟಾರ್ಸ್' ಎಂಬ, ರಾಷ್ಟ್ರವ್ಯಾಪಿ ವಿಶೇಷ ಸಂಗೀತ ಕಛೇರಿಗಳ, ಪ್ರತಿಭಾ ಪ್ರದರ್ಶನಕ್ಕೆ, ಅವಕಾಶ ಕಲ್ಪಿಸಿದೆ. ಆಕಾಶವಾಣಿ ಧಾರವಾಡ ಕೇಂದ್ರ, ಇಂದು, ಸಂಜೆ 6 ಗಂಟೆಗೆ, ನಗರದ ಕರ್ನಾಟಕ ಕುಲಪುರೋಹಿತ, ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, ಕಾರ್ಯಕ್ರಮ ಆಯೋಜಿಸಿದೆ.

<><><>

ಕರ್ನಾಟಕದ, ಸುದೃಢ ಸೆಮಿಕಂಡಕ್ಟರ ಹಾಗೂ ಎಲೆಕ್ಟ್ರಾನಿಕ್ಸ್ ಪರಿಸರ ವ್ಯವಸ್ಥೆಯ ಪ್ರಯೋಜನ ಪಡೆದು, ರಾಜ್ಯದಲ್ಲಿ ಎಲೆಕ್ಟ್ರಾನಿಕ್ಸ್ ಕಾಂಪೋನೆಂಟ್ ಗಳ ಹಾಗೂ ಸಂಬಂಧಿತ ಉತ್ಪನ್ನಗಳ ತಯಾರಿಕಾ ಘಟಕ ಸ್ಥಾಪಿಸಲು, ಜಪಾನಿನ ಜೆ.ಎಕ್ಸ್ ಮೆಟಲ್ಸ್ ಟ್ರೇಡಿಂಗ್ ಸಂಸ್ಥೆ ಆಸಕ್ತಿ ವಹಿಸಿದೆ ಎಂದು ಕೈಗಾರಿಕಾ ಖಾತೆ ಸಚಿವ ಎಂ.ಬಿ ಪಾಟೀಲ್ ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.

<><><>

ಯುವಜನರಲ್ಲಿ ಉದ್ಯಮಶೀಲ ಗುಣ ಬೆಳೆಸಲು, ದೇಶಾದ್ಯಂತ ಸಂಚರಿಸುತ್ತಿರುವ, ಕಲಿಕಾ ಪಯಣ, 'ಜಾಗೃತಿ ಯಾತ್ರೆ'ಯ, ಒಟ್ಟು 525 ಯುವ ಪ್ರತಿನಿಧಿಗಳು, ಇಂದು ಧಾರವಾಡ ಜಿಲ್ಲೆಯ, ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಆಗಮಿಸಿದ್ದಾರೆ. ವಿದ್ಯಾರ್ಥಿಗಳ ಸಂಗೀತ, ನೃತ್ಯ ಹಾಗೂ ಅಭಿನಯ ಪ್ರತಿಭೆ ವೀಕ್ಷಿಸಿ, ಸಂವಾದ ನಡೆಸಲಿದ್ದಾರೆ. ಜಾಗೃತಿ ಯಾತ್ರೆಯ ಯುವ ಪ್ರತಿನಿಧಿ, ಬೆಂಗಳೂರಿನ ಸಹನಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸಹನಾ ಧ್ವನಿ – 38 ಸೆಕೆಂದುಗಳು

<><><>

ಕೊಡಗು ಜಿಲ್ಲೆಯಲ್ಲಿ, ಹುತ್ತರಿ ಹಬ್ಬದ ಸಿದ್ಧತೆಗಳು ನಡೆಯುತ್ತಿವೆ. ಮಳೆ ದೈವ, ಶ್ರೀ ಪಾಡಿ ಇಗ್ಗುತ್ತಪ್ಪ ಸನ್ನಿಧಿಯ ಗದ್ದೆಯಲ್ಲಿ, ಇಂದು ರಾತ್ರಿ 7.5 ಕ್ಕೆ ಕದಿರು ತೆಗೆದು, ಭತ್ತದ ತೆನೆಗೆ ವಿಶೇಷ ಪೂಜೆ ಸಲ್ಲಿಸಿದ, ಬಳಿಕ ಜಿಲ್ಲೆಯಾದ್ಯಂತ ತೆನೆ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಹುತ್ತರಿ ಹಬ್ಬದ ಮೂಲಕ, ಧಾನ್ಯ ಲಕ್ಷ್ಮಿಗೆ ಗೌರವ ಸೂಚಿಸಲಾಗುತ್ತದೆ.

<><><>

ಹಾಸನ ಜಿಲ್ಲೆಯಿಂದ, ಭದ್ರಾ ಅಭಯಾರಣ್ಯಕ್ಕೆ, ಮೂಡಿಗೆರೆ ಮೂಲಕ ಕಾಡಾನೆಗಳ ಸ್ಥಳಾಂತರ ವಿರೋಧಿಸಿ, ಇಂದು ಮೂಡಿಗೆರೆ ಪಟ್ಟಣ ಬಂದ್ ಮಾಡಲಾಗಿದೆ. ರಾಜಕೀಯ ಪಕ್ಷಗಳು, ರೈತ ಸಂಘಟನೆಗಳು, ಕಾಫಿ ಬೆಳೆಗಾರರು, ಮುಂಜಾನೆಯಿಂದ ಸಂಜೆ 6 ಗಂಟೆಯವರೆಗೆ ಬಂದ್‌ಗೆ ಕರೆ ನೀಡಿದ್ದಾರೆ. ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿದ್ದು, ವ್ಯಾಪಾರ ವಹಿವಾಟು ಸ್ಥಗಿತಗೊಂಡಿದೆ.

<><><>

ಗೋವಾದಲ್ಲಿ ಆಯೋಜಿತ, 57 ನೇ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ, ಈ ಮಧ್ಯಾಹ್ನ 12.45 ಕ್ಕೆ, ಇಂಡಿಯನ್ ಪನೋರಮ ವಿಭಾಗದಲ್ಲಿ, ನೀರಜ ಕುಮಾರ ಮಿಶ್ರಾ ನಿರ್ದೇಶನದ, 'ಸೇವ್ ದಿ ಗಾಡ್' ಹಿಂದಿ ಸಿನಿಮಾ ಪ್ರದರ್ಶನಗೊಳ್ಳಲಿದೆ. 2.15 ಕ್ಕೆ ಗಿರ್ಕಿಸ ಭಾಷೆಯ, ಸ್ಕೈ ಲಾರ್ಕ್ ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

<><><>

ಚಿತ್ರದುರ್ಗ ನಗರದ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ, ತಾತ್ಕಾಲಿಕವಾಗಿ ನಡೆಯುತ್ತಿರುವ ಕೇಂದ್ರೀಯ ವಿದ್ಯಾಲಯಕ್ಕೆ, ಸ್ವಂತ ಕಟ್ಟಡ ನಿರ್ಮಿಸಲು ಕೇಂದ್ರ ಸರ್ಕಾರ 33 ಕೋಟಿ 50 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡಿದೆ ಎಂದು ಸಂಸದ ಗೋವಿಂದ ಎಂ. ಕಾರಜೋಳ ತಿಳಿಸಿದ್ದಾರೆ. ನಗರಕ್ಕೆ

ಹೊಂದಿಕೊಂಡಿರುವ ಜಾಲಿಕಟ್ಟೆ ಬಳಿಯ, ಐದು ಎಕರೆ ಜಾಗೆಯಲ್ಲಿ ನೂತನ ಶಾಲಾ ಸಮುಚ್ಚಯ ನಿರ್ಮಾಣವಾಗಲಿದೆ ಎಂದಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>